**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು**

**ಸಿ.ಸಿ.406/2022**

| | | |
|---|---|---|
| ಸಾಕ್ಷಿದಾರರ ಹೆಸರು : | ಕೆ ಎಂ ಯೋಗೇಶ | ಪ್ರಮಾಣ ವಚನ ಬೋಧಿಸಿದ ದಿನಾಂಕ: 08**.07.2024** |
| ತಂದೆಯ ಹೆಸರು : | ಮಹಾಲಿಂಗಪ್ಪ | |
| ವಯಸ್ಸು : | 52 ವರ್ಷ | ಪಿ.ಡಬ್ಲ್ಯೂ.-10 |
| ಉದ್ಯೋಗ : | ಪಿ ಐ ಮಹಿಳಾ ಪೋಲೀಸ್ ಠಾಣೆ ಚಿಕ್ಕಮಗಳೂರು | ಸಿ.ಡಬ್ಲ್ಯೂ.-12 |
| ವಾಸ ಸ್ಥಳ : | ಚಿಕ್ಕಮಗಳೂರು | |

**ಮುಖ್ಯ ವಿಚಾರಣೆ : ಮಾನ್ಯ ಸ.ಸ.ಅ. ರವರಿಂದ :-**

1. ನಾನು ಬೇಲೂರು ಪೋಲಿಸ್ ಠಾಣೆಯಲ್ಲಿ ಪಿ ಐ ಆಗಿ ದಿಃ03.06.2021 ರಿಂದ 09.08.2022 ರ ವರೆಗೆ ಕರ್ತವ್ಯ ನಿರ್ವಹಿಸಿರುತ್ತೇನೆ.

2. ದಿ: 28/02/2022 ರಂದು ಪ್ರಕರಣದ ಕಡತವನ್ನು ಚಾಸಾ 11 ರವರಿಂದ ಪಡೆದು ಅಲ್ಲಿಯವರೆಗೆ ಆದ ತನಿಖೆಯನ್ನು ಪರಿಶೀಲಿಸಿರುತ್ತೇನೆ. ಅದೇ ದಿನ ಚಾಸಾ 11 ರವರಿಗೆ ಆರೋಪಿತರನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ಮೆಮೋವನ್ನು ನೀಡಿರುತ್ತೇನೆ. ಸದರಿ ಮೆಮೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 14 ಎಂದು ಗುರುತಿಸಲಾಗಿದ್ದು ಸಾಕ್ಷಿ ಸಹಿಯನ್ನು ನಿಪಿ 14 ಎ ಎಂದು ಗುರುತಿಸಲಾಯಿತು. ಅದೇ ದಿನ ರಾತ್ರಿ 8-00 ಗಂಟೆಗೆ ಚಾಸಾ 11 ರವರು ಆರೋಪಿತರಾದ ಗೋಕುಲ್ ಮತ್ತು ಚಂದ್ರಶೇಖರ್ ರವರನ್ನು ನನ್ನ ಮುಂದೆ ಕಛೇರಿಗೆ ಹಾಜರುಪಡಿಸಿದರು. ಆರೋಪಿತರಿಬ್ಬರನ್ನು ದಸ್ತಗಿರಿ ಮಾಡಿ ರಿಮ್ಯಾಂಡ್ ಅರ್ಜಿಯೊಂದಿಗೆ ನ್ಯಾಯಾಲಯಕ್ಕೆ ಹಾಜರುಪಡಿರುತ್ತೇನೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ಆರೋಪಿತರನ್ನು ನೋಡಿ ಗುರುತಿಸಿರುತ್ತಾರೆ.

3. ದಿಃ01.03.2022 ರಂದು ಕೃತ್ಯ ನಡೆದ ಸ್ದಳವಾದ ಬೇಲೂರು ಮುಖ್ಯ ರಸ್ತೆಯ ಜಿ ಎನ್ ಎಂಟರ್ ಪ್ರೈಸಸ್ ಅಂಗಡಿಯ ಮುಂಭಾಗ ಸ್ಥಳ ಮಹಜರ್ ಮಾಡಲು ಹೋದೆವು. ಪಂಚರನ್ನಾಗಿ ಚಾಸಾ 3 ಮತ್ತು 7 ರವನ್ನು ಸ್ದಳಕ್ಕೆ ಬರಮಾಡಿಕೊಂಡೆನು. ಚಾಸಾ 1 ಸ್ದಳ ದಲ್ಲಿ ಹಾಜರಿದ್ದು, ಸ್ದಳ ತೋರಿಸಿರುತ್ತಾರೆ. ಸ್ದಳವನ್ನು ಪರಿಶೀಲಿಸಿ ಚಾಸಾ 1,3 ಮತ್ತು 7 ರವರ ಸಮಕ್ಷಮ ನಿಪಿ 2 ರಂತೆ ಪಂಚನಾಮೆಯನ್ನುಬೆಳಗ್ಗೆ 10-00 ರಿಂದ 10-45 ರ ವರೆಗೆ ಜರುಗಿಸಿರುತ್ತೇನೆ. ನಿಪಿ 2ಕ್ಕೆ ಚಾಸಾ 1, 3 ಮತ್ತು 7 ರವರ ಸಹಿಗಳನ್ನು ಪಡೆದಿರುತ್ತೇನೆ. ಸದರಿಯವರ ಸಹಿಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅವುಗಳನ್ನು ಈಗಾಗಲೆ ನಿಪಿ 2(ಎ) ಯಿಂದ (ಸಿ) ಎಂದು ಗುರುತಿಸಲಾಗಿದೆ. ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ 2(ಡಿ) ಎಂದು ಗುರುತಿಸಲಾಯಿತು.

4. ಪೋಲೀಸರು ಸೂಚನೆ ಮೇರೆಗೆ ಚಾಸಾ -3 ರವರು ವಾಹನ ಸಂ. ಕೆ ಎ 06 ಬಿ 0656 ಅನ್ನು ಠಾಣೆಗೆ ತಂದು ಘಟನೆ ಆದ ದಿನವೇ ನಿಲ್ಲಿಸಿದರು. ಸದರಿ ವಾಹನವನ್ನು ದಿಃ01.03.2022 ರಂದು ವಾಹನ ಮತ್ತು ಅದರ ಕೀಯನ್ನು ಅಮಾನತ್ತು ಪಡಿಸಿಕೊಂಡು ಚಾಸಾ 3 ಮತ್ತು 6 ರವರ ಸಮಕ್ಷಮ ನಿಪಿ3 ರಂತೆ ಮಹಜರನ್ನು ಬೆಳಗ್ಗೆ 11-30 ರಿದದಿ 12-00 ರ ತವಕ ಜರುಗಿಸಿರುತ್ತೇನೆ. ನಿಪಿ 3 ರ ಸಮಯದಲ್ಲಿ ಚಾಸಾ

10 ರವರು ಹಾಜರಿದ್ದರು. ನಿಪಿ 3 ಕ್ಕೆ ಚಾಸಾ 10 ,3 ಮತ್ತು 6 ರವರ ಸಹಿ ಪಡೆದಿರುತ್ತೇನೆ. ಸದರಿಯವರ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಚಾಸಾ 3 ಮತ್ತು 6 ರವರ ಸಹಿಯನ್ನು ಈಗಾಗಲೇ ನಿಪಿ 3 ಎ ಮತ್ತು ನಿಪಿ 3 ಬಿ ಎಂದು ಗುರುತಿಸಲಾಗಿದೆ. ಚಾಸಾ 10 ರವರ ಸಹಿಯನ್ನು ನಿಪಿ 3 ಸಿ ಎಂದು ಗುರುತಿಸಲಾಯಿತು. ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ನಿಪಿ 3 ಡಿ ಎಂದು ಗುರುತಿಸಲಾಯಿತು. ಅಮಾನತ್ತು ಪಡಿಸಿಕೊಂಡ ವಾಹನವನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನಿಪಿ 5 ರಿಂದ 8 ರಲ್ಲಿ ವಾಹಾನವನ್ನು ನೋಡಿ ಗುರುತಿಸಿರುತ್ತಾರೆ.

5.ಅಮಾನತು ಪಡಿಸಿಕೊಂಡ ವಾಹನವನ್ನು ಮಾಲು ಪಟ್ಟಿಸಂಖ್ಯೆ 35/22 ಕ್ಕೆ ಅಳವಡಿಸಿ ಮಾನ್ಯ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸದರಿ ಮಾಲು ಪಟ್ಟಿಯನ್ನು ನಿಪಿ 15 ಎಂದು ಸಾಕ್ಷಿಯ ಸಹಿಯನ್ನು ನಿಪಿ 15(ಎ) ಎಂದು ಗುರುತಿಸಲಾಯಿತು. ಅದೇ ದಿನ ಸಾಕ್ಷಿದಾರರಾದ ಚಾಸಾ 1 ರವರ ಮರುಹೇಳಿಕೆ ಮತ್ತು ಚಾಸಾ 2 ರಿಂದ 6 ರವರ ಹೇಳಿಕೆಯನ್ನು ಮಾಡಿಕೊಂಡಿರುತ್ತೇನೆ. ಚಾಸಾ 3 ರಿಂದ 5 ನನ್ನ ಸಮಕ್ಷಮ ನಿಪಿ 1 ,4 ಮತ್ತು 9 ರಂತೆ ಹೇಳಿಕೆ ನೀಡಿರುತ್ತಾರೆ.

6. ವಾಹನದ ಕೀಯನ್ನು ಮಾಲುಪಟ್ಟಿಯಲ್ಲಿ ನಮೂದಿಸದೇ ಇದ್ದ ಕಾರಣ ದಿನಾಂಕ 08/03/2022 ರಂದು ಪಿ ಎಫ್ 35/22 ರಲ್ಲಿಯೇ ಕೀಯನ್ನು ನಮೂದಿಸಲು ಅವಕಾಶ ಕೋರಿ ನ್ಯಾಯಾಲಯಕ್ಕೆ ಮನವಿ ಸಲ್ಲಿಸಿರುತ್ತೇನೆ. ಸದರಿ ಮನವಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 16 ಎಂದು ಸಾಕ್ಷಿಯ ಸಹಿಯನ್ನು ನಿಪಿ 16 ಎ ಎಂದು ಗುರುತಿಸಲಾಯಿತು. ಕೀಯನ್ನು ನೋಡಿದರೆ ಗುರುತಿಸುತ್ತೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಗಾಡಿಯನ್ನು ಬಿಡುಗಡೆ ಗೊಳಿಸಿದಾಗ ಕೀಯನ್ನು ಕೊಟ್ಟಿರುತ್ತೇವೆ ಎಂದು ನುಡಿಯುತ್ತಾರೆ.

7. ದಿಃ16.03.2022 ರಂದು ಆರ್ ಟಿ ಒ ದವರಿಗೆ ಈ ಪ್ರಕರಣದಲ್ಲಿ ಅಮಾನತ್ತು ಪಡಿಸಿಕೊಂಡ ವಾಹನ ಯಾಂತ್ರಿಕವಾಗಿ ಸುಸ್ಥಿತಿಯಲ್ಲಿದೆಯೇ ಇಲ್ಲವೋ ಎಂದು ಪರಿಶೀಲಿಸಿ ವರದಿ ನೀಡುವಂತೆ ಕೇಳಿಕೊಂಡಿರುತ್ತೇನೆ. ದಿಃ 17.03.2022 ರಂದು ಆರ್ ಟಿ ಒ ದರವರು ವಾಹನವನ್ನು ಪರಿಶೀಲಿಸಿ ಅದೇ ದಿನ ವಾಹನ ಸಂಚಾರಕ್ಕೆ ಯೋಗ್ಯವಾಗಿರುತ್ತದೆ ಎಂದು ವರದಿ ನೀಡಿರುತ್ತಾರೆ. ಸದರಿ ವರದಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 17 ಎಂದು ಸಾಕ್ಷಿ ಸಹಿಯನ್ನು 17 ಎ ಎಂದು ಗುರುತಿಸಲಾಯಿತು. ನ್ಯಾಯಾಲಯದ ಆದೇಶದಂತೆ ವಾಹವನ್ನು ಮತ್ತು ಕೀಯನ್ನು ಅದರ ಮಾಲೀಕರಿಗೆ ಬಿಟ್ಟು ಕೊಟ್ಟಿರುತ್ತೇನೆ. ವಾಹನ ಬಿಡುಗಡೆ ಗೊಳಿಸುವಾಗಿ ನಿಪಿ 7 ಮತ್ತು 8 ರಂತೆ ಪೋಟೋ ತೆಗೆಸಿರುತ್ತೇನೆ.

8.ದಿಃ25.04.2022 ರಂದು ಚಾಸಾ 1 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ನಿಪಿ 11 ರಲ್ಲಿ ಸಾಕ್ಷಿ ತನ್ನ ಸಹಿ ನೋಡಿ ಗುರುತಿಸಿದ್ದು ಅದನ್ನು ನಿಪಿ 11 ಬಿ ಎಂದು ಗುರುತಿಸಲಾಯಿತು. ದಿಃ13.06.2022 ರಂದು ಚಾಸಾ 10 ರವರಿಂದ ಕ್ಯಾಮರಾದಿಂದ ಪೋಟೋ ಮಾಡಿ ಸಿ ಡಿ ಮಾಡಿದ ಬಗ್ಗೆ ಅವರಿಂದ ಪ್ರಮಾಣ ಪತ್ರ ಪಡೆದುಕೊಂಡಿರುತ್ತೇನೆ. ಪ್ರಮಾಣ ಪತ್ರವನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ 18 ಎಂದು ಸಾಕ್ಷಿ ಸಹಿಯನ್ನು 18 ಎಂದು ಗುರುತಿಸಲಾಯಿತು. ಸಾಕ್ಷಿ ಸಿ ಡಿ ಅನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ 19 ಎಂದು ಗುರುತಿಸಲಾಯಿತು.

ತನಿಖೆ ಪೂರ್ಣ ಗೊಂಡಿದ್ದರಿಂದ ಆರೋಪಿತರ ವಿರುದ್ದ ಆರೋಪ ಸಾಭೀತಾದ ಕಾರಣ ನ್ಯಾಯಾಲಯಕ್ಕೆ ದೋಷರೋಪಣಾ ಪಟ್ಟಿ ಸಲ್ಲಿಸಿರುತ್ತೇನೆ.

**ಪಾಟೀ ಸವಾಲು : ಎಸ್. ಎನ್ ಎಲ್ . ವಕೀಲರಿಂದ ಆರೋಪಿತರ ಪರವಾಗಿ:-**

1. ಕಡತ ತೆಗೆದುಕೊಂಡ ಸಮಯದಲ್ಲಿ ಚಾಸಾ-1 ರವರ ವಿಚಾರಣೆ ಮಾಡಿದ್ದೀರಾ ಎಂದು ಪ್ರಶ್ನಿಸಲಾಗಿ ಸಾಕ್ಷಿ ಆಗ ಮಾಡಿಲ್ಲ ತನಿಖಾ ಅವಧಿಯಲ್ಲಿ ನಂತರ ಮಾಡಿರುತ್ತೇನೆ ಎಂದು ನುಡಿಯುತ್ತಾರೆ. ನಿಡಿ-1 ರಲ್ಲಿರುವ ಸಹಿ ಚಾಸಾ 1 ರಮೇಶ್ ರವರದ್ದೇ ಆಗಿರುತ್ತದೆ. ಸದರಿ ಸಹಿಯನ್ನು ನಿಡಿ 1 ಎ ಎಂದು ಗುರುತಿಸಲಾಯಿತು. ನಿಡಿ 1 ರಂತೆ ದಂಡ ಹಾಕಿದ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ.

2. ವಾಹನದ ಜತೆಗೆ ಕೀಯನ್ನು ಅಮಾನತ್ತು ಪಡಿಸಿಕೊಂಡ ಬಗ್ಗೆ ನಮೂದು ಮಾಡಿರುತ್ತೇನೆ. ವಾಹನ ಬಿಡುಗಡೆ ಆದೇಶ ನ್ಯಾಯಾಲಯದಿಂದ ಬಂದಿದ್ದರೂ ವಾಹವನನ್ನು ಬಿಡಬರಾದು ಎಂದು ದುರುದ್ದೇಶದಿಂದ ಆರಿ ಟಿ ಒ ದವರಿಗೆ ವರದಿ ಸಲ್ಲಸುವಂತೆ ಕೇಳಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ದಿಃ15.03.2022 ರಂದು ನನಗೆ ಆದೇಶವನ್ನು ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತೇನೆ ಎಂದರೆ ಸರಿಯಲ್ಲ.

3. ಆರೋಪಿತರು ಯಾವುದೇ ರೀತಿಯಲ್ಲಿ ಗಲಾಟೆ ಮಾಡಿಲ್ಲ ಎನ್ನುವುದು ಸರಿಯಲ್ಲ. ಆರೋಪಿತರು ಸೀಟನ್ನು ಸರಿಯಾಗಿ ಹಾಕಿಕೊಂಡು ಬಂದಿದ್ದರೂ ಚಾಸಾ 1 ರವರು ವಿನಾಃ ಕಾರಣ ದಂಡ ಹಾಕಿದ್ದು ಇದನ್ನು ಪ್ರಶ್ನಿಸಿದಾಗ ಸುಳ್ಳು ದೂರನ್ನು ಚಾಸಾ 1 ರವರು ನೀಡಿರುತ್ತಾರೆ ಎನ್ನುವುದು ಸರಿಯಲ್ಲ. ಉದ್ದೇಶ ಪೂರ್ವಕವಾಗಿ ವಾಹನವನ್ನು ಅಮಾನತ್ತು ಪಡಿಸಿರುತ್ತೇವೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ವಾಹನದ ವಿಚಾರವಾಗಿ ಗಲಾಟೆ ಆದ ಕಾರಣ ವಾಹನವನ್ನು ಅಮಾನತ್ತು ಪಡಿಸಿರುತ್ತೇವೆ ಎನ್ನುವುದು ಸರಿಯಲ್ಲ. ಯಾವುದೇ ಗಲಾಟೆ ನಡೆಯದೇ ಇದ್ದರೂ ಉದ್ದೇಶಪೂರ್ವಕವಾಗಿ ದೂರು ದಾಖಲಿಸಿಕೊಂಡು ತೊಂದರೆ ಕೊಡುವ ಉದ್ದೇಶದಿಂದಲೇ ಆರೋಪಿತರನ್ನು ಕಾಡಿಸಿ ಲೇಟಾಗಿ ವಾಹನವನ್ನು ಬಿಡುಗಡೆ ಮಾಡಿ ಮತ್ತು ಆರೋಪಿತರ ವಿರುದ್ದ ಸುಳ್ಳು ದೋ. ಪಟ್ಟಿ ಸಲ್ಲಿಸಿರುತ್ತೇವೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ : ಏನೂ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಬೇಲೂರು.